

ಊರ ಹೊರಗಿನ ಹಳ್ಳದ ದಂಡೆ ಮೇಲಿನ ರಾಯನ ಗುಡಿ ಕೆಲಕಾಲ ಸೋಮಾರಿ ಯುವಕರ ಇಸ್ಪೀಟು ಅಡ್ಡೆ ಆಗಿಯೂ ಒದಗಿಬಂದದ್ದುಂಟು. ಕ್ರಮೇಣ ಆ ಯುವಕರ ಇಸ್ಪೀಟು ಹವ್ಯಾಸ ಬದಲಾಗಿ ಕಾರ್ಖಾನೆ ಬಳಿಯ ಡಾಬಾದಲ್ಲಿ ಅನಧಿಕೃತವಾಗಿ ಸರಬರಾಜಾಗುತ್ತಿದ್ದ ಮದ್ಯಪಾನದತ್ತ ಹೊರಳಿದ್ದು ಹಳ್ಳದರಾಯನಿಗೆ ಬಿದ್ದ ಬಹುದೊಡ್ಡ ಹೊಡೆತ. ಹೀಗೆ ತನ್ನ ಆವರಣದಲ್ಲಿನ ಚಟುವಟಿಕೆಗಳ ಕಾರಣಗಳನ್ನೆಲ್ಲಾ ಒಂದೊಂದಾಗಿ ಕಳೆದುಕೊಳ್ಳುತ್ತಾ ಬಂದ ಹಳ್ಳದರಾಯನ ಗುಡಿಯೀಗ ಹಾವುಚೇಳುಗಳ ವಾಸಸ್ಥಾನ.

ಹೇಗಾದರೂ ಮಾಡಿ ರಾತ್ರಿ ತಂಗಲು ಒಂದು ತಾಣ ಹುಡುಕುವುದು ಹಗಲುವೇಷಗಾರ ತಂಡದ ಯಜಮಾನ ರಾಮಾಂಜಿನಿಯ ಹೊಣೆಯಾಗಿತ್ತು. ಇಂಥ ಎಷ್ಟೋ ಊರುಗಳನ್ನು ಸುತ್ತಿರುವ ಆತನಿಗೆ ಈ ಅನುಭವ ಹೊಸದೇನೂ ಅಲ್ಲ. ಆತನಿಗದು ಸವಾಲು, ಸಂಕಷ್ಟ ಅಥವಾ ಕಳವಳವಾಗಿಯೂ ಕಾಡುವುದಿಲ್ಲ. ಸಂಸಾರವನ್ನು ತಾತ್ಕಾಲಿಕವಾಗಿ ಹುಣಸೀಮರದ ಕೆಳಗೆ ಉಳಿಸಿ ಊರೊಳಗೆ ಅಲೆದಾಡುತ್ತಿದ್ದ ರಾಮಾಂಜಿನಿಗೆ ಹಳ್ಳಿಗರು ಉತ್ಸಾಹ, ಉಡಾಫೆ, ತಮಾಷೆ ಬೆರೆಸಿ ನೀಡಿದ ಸಲಹೆಗಳು ಉಚಿತವಾಗಿದ್ದವೇ ಹೊರತು ಉಪಯೋಗಕ್ಕೆ ಬರುವಂತಿರಲಿಲ್ಲ.

ಊರ ಪಕ್ಕದಲ್ಲಿ ಕಾರ್ಖಾನೆ ಬಂದಮೇಲೆ ವಿವಿಧ ನೌಕರಿ, ಚಾಕರಿ, ಗುತ್ತಿಗೆ ಕಾಮಗಾರಿ ಇತ್ಯಾದಿ ಅರಸಿ ಹೊರಗಿನಿಂದ ಬಂದವರೇ ಮೂಲನಿವಾಸಿಗಳ ಜನಸಂಖ್ಯೆ ಮೀರಿಸಿದ್ದರು. ಹಾಗಾಗಿ ಅಡುಗೆಮನೆ, ಬಚ್ಚಲುಮನೆಗಳನ್ನೂ ಕೋಣೆಗಳನ್ನಾಗಿ ಪರಿವರ್ತಿಸಿ ಬಾಡಿಗೆ ರುಚಿ ಕಂಡಿದ್ದ ಹಳ್ಳಿಯ ಜನ ಅಲೆಮಾರಿ ಕಲಾವಿದರಿಗಾಗಿ ಪುಕ್ಕಟೆ ಜಾಗೆ ಒದಗಿಸುವಷ್ಟು ದೊಡ್ಡ ಮನಸ್ಸು ಹೊಂದಿರಲಿಲ್ಲ.

ಸಂಜೆಯಷ್ಟೊತ್ತಿಗೆ ಗುಂಡಿ ಕಿತ್ತು ಕೆಳಗೆ ಜರಿಯುತ್ತಿದ್ದ ಚೊಣ್ಣವನ್ನು ಎಡಗೈಯಲ್ಲಿ ಹಿಡಿದ ಬಾಲಕನೊಬ್ಬ ಬಲಗೈಯಲ್ಲಿ ಶಾಲಾ ಕಟ್ಟಡವನ್ನು ತೋರಿಸಿದ. ಅಲ್ಲಿ ರಾತ್ರಿ ಕಳೆಯಲು ಶಾಲೆಯ ಮುಖ್ಯೋಪಾಧ್ಯಾಯರ ಅನುಮತಿ ಬೇಕಿತ್ತು. ಓಸಿ ಚಟ ಅಂಟಿಸಿಕೊಂಡು ಅದರಲ್ಲೇ ಉನ್ನತ ವ್ಯಾಸಂಗ ಮಾಡುವವನಂತೆ ಸದಾ ಸಂಖ್ಯೆಗಳ ಗುಂಗಿನಲ್ಲಿರುತ್ತಿದ್ದ ಆ ಪುಣ್ಯಾತ್ಮ ಶಾಲೆ ಮುಗಿದ ಅನಂತರ ಪಟ್ಟಣ ಸೇರಿದರೆ ಹಿಂದಿರುಗುವುದು ನಡುರಾತ್ರಿ ಕ್ಲೋಸ್ ಪ್ರಕಟವಾದ ಅನಂತರವೇ ಎಂದು ತಿಳಿದಾಗ ರಾಮಾಂಜಿನಿಯ ಆಸೆ ಕಳಚಿಬಿತ್ತು.

ಆಗ ಭೇಟಿಯಾಗಿದ್ದು ಪತ್ರಕರ್ತ, ಕವಿ, ಹೋರಾಟಗಾರ, ಆರ್.ಟಿ.ಐ. ಕಾರ್ಯಕರ್ತ, ಗುತ್ತಿಗೆದಾರ, ರಾಜಕಾರಣ ಎಲ್ಲವೂ ಒಬ್ಬನೇ ಆಗಿದ್ದ ಅನಿಲಕುಮಾರ ಈಳಗಿ ಎಂಬ ಹೆಸರಿನ ಯುವಕ. ಈತ ಸ್ವತಃ ಭ್ರಷ್ಟಾಚಾರಿ ಮತ್ತು ಭ್ರಷ್ಟಾಚಾರ ವಿರೋಧಿ ಎರಡೂ ಪಾತ್ರಗಳನ್ನು ಏಕಕಾಲಕ್ಕೆ ಸಮರ್ಥವಾಗಿ ನಿರ್ವಹಿಸುತ್ತಿದ್ದ. ಅಕ್ರಮ ಗಣಿಗಾರಿಕೆ ವಿರುದ್ಧ ಸಮರ ಸಾರಿದ್ದ ಹೋರಾಟಗಾರ ಎಮ್.ಆರ್. ಹಿರೇಮಠ ಅವರ ಸಹವರ್ತಿ ಎಂದು ಒಂದು ಕಾಲಕ್ಕೆ ಗುರುತಿಸಿಕೊಂಡಿದ್ದ ಈಳಗಿ ಕ್ರಮೇಣ ಪ್ರತಿಭಟನೆಯನ್ನು ಲಾಭ ಬಾಚುವ ಅಸ್ತ್ರವಾಗಿ ಬಳಸಿಕೊಳ್ಳುವಷ್ಟು ಪ್ರಬುದ್ಧನಾಗಿ ಬೆಳೆದಿದ್ದ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹುರಿಯಾಳಾದರೆ ಅಚ್ಚರಿಯಿಲ್ಲ. ಹಾಗಾಗಿ, ಈತನದು ಅಂದರಿಕಿ ಮಂಚಿವಾಡು ಧೋರಣೆ. ಇದು ವ್ಯಕ್ತಿಯೊಬ್ಬನ ಸ್ವಾಭಾವಿಕ ಬೆಳವಣಿಗೆ ಎಂದು ಸಹಜವಾಗಿ ಸ್ವೀಕರಿಸುವ ಹಳ್ಳಿಯ ಜನರ ದೃಷ್ಟಿಯಲ್ಲಿ ಈಳಗಿ ಉತ್ತಮ ರಾಜಕೀಯ ಭವಿಷ್ಯವಿರುವ ಬುದ್ಧಿವಂತ ಯುವಕ. ಅನೇಕರ ಅನುಕರಣೆಗೆ ಮಾದರಿ ಕೂಡ.

ರಾಮಾಂಜಿನಿಯ ಸಮಸ್ಯೆಗೆ ತಕ್ಷಣ ಸ್ಪಂದಿಸಿದ ಈಳಗಿ, ಗ್ರಾಮ ಪಂಚಾಯ್ತಿ ಕಟ್ಟಡದ ಹಿಂಭಾಗದಲ್ಲಿ ತಂಗಲು ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಿ, ದೂರವಾಣಿಯಲ್ಲಿ ಯಾರ್ಯಾರನ್ನೋ ಸಂಪರ್ಕಿಸತೊಡಗಿದ. ಪಂಚಾಯ್ತಿ ಕಚೇರಿಗೆ ಸಂಬಂಧಿಸಿದ ಪ್ರತಿಯೊಬ್ಬರೂ ಮತ್ತೊಬ್ಬರ ಮೇಲೆ ಜವಾಬ್ದಾರಿ ಹೊತ್ತುಹಾಕಿದರು. ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಸದಸ್ಯರ ಮಿತಿಮೀರಿದ